ಇದು ಬೆಳೆಯುವಂತೆ ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ತಾವು ಹೇಳಿದ ಮಾತು ಒಪ್ಪಿಕೊಳ್ಳುತ್ತೇನೆ, ಮೊದಲಿದ್ದ ದರಕ್ಕಿಂತ ಈಗ ಕಡಿಮೆ ಮಾಡಿದ್ದಾರೆ.

ಶ್ರೀ ಬಿ.ಎ.ಮೊಯಿಸುದೀನ್:- ಕೂಡಲೇ ನಾನು ಸಭೆ ಕರೆಸುತ್ತೇನೆ. ತಮ್ಮನ್ನೂ ಕರೆಸುತ್ತೇನೆ.

ವಿಷಯ:- ರೇಷ್ಮೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 146 (664)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ರೇಷ್ಮೆ ಕೃಷಿರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ : 24.1.94 ರಂದು 160 ರೇಷ್ಮೆ ನಿರೀಕ್ಷಕರು, 216 ರೇಷ್ಮೆ ಪ್ರದರ್ಶಕರ ಹುದ್ದೆಗಳಿಗೆ ಅರ್ಜಿ ಕರೆದಿದ್ದಾಗ್ಯೂ ಇನ್ನುವರೆಗೆ ಖಾಲಿ ಹುದ್ದೆಗಳನ್ನು ತುಂಬದಿರಲು ಕಾರಣಗಳೇನು

ಆ) ಇವುಗಳನ್ನು ಯಾವಾಗ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಅರ್ಜಿ ಹಾಕಿದ ನಂತರ ವಯೋಮಿತಿಯಿಂದ ತೊಂದರೆ ಆದವರಿಗೆ ಪರಿಹಾರವೇನು?

ಶ್ರೀ ಎಂ.ವರದೇಗೌಡ (ರೇಷ್ಮೆ ಕೃಷಿ ರಾಜ್ಯ ಮಂತ್ರಿಗಳು):-

ಅ) ಕಾರಣಗಳು.

1) ರಾಜ್ಯದ ಮೀಸಲಾತಿ ನೀತಿಯಲ್ಲಿ ಬದಲಾವಣೆ ಆದದ್ದು : ಮತ್ತು ಅದರ ಮೇಲೆ ಸರ್ವೋಚ್ಚ ನ್ಯಾಯಾಲಯದ ಆದೇಶದಿಂದ

2) ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾವೆ ಹೂಡಿದ್ದರಿಂದ

ಆ) ಆಯ್ಕೆಗೊಂಡ ಅಭ್ಯರ್ಥಿಗಳ ಜಾತಿ : ವರಮಾನಗಳ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಂದ ದೃಢೀಕರಣ ಪತ್ರಗಳು ಬಂದ ನಂತರ

ಇ) ಅಭ್ಯರ್ಥಿಗಳ ವಯೋಮಿತಿಯನ್ನು ಅರ್ಜಿ ಕರೆದಾಗ ನಿಗದಿಪಡಿಸಿದ್ದ ದಿನಾಂಕದಂದು ಇದ್ದಂತೆ ಪರಿಗಣಿಸುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಯು.ಬಿ.ಬಣಕಾರ್:- ಅಧ್ಯಕ್ಷರೇ ವಿದ್ಯಾವಂತ ನಿರುದ್ಯೋಗಿ ಯುವಕರು ಸಮಾಜಕ್ಕೆ ತಂದೆತಾಯಿಗಳಿಗೆ ಭಾರವಾಗಿರುವ ಈ ಸಂದರ್ಭದಲ್ಲಿ ರೇಷ್ಮೆ ಇಲಾಖೆಯಲ್ಲಿ 24-1-94ರಲ್ಲಿ ಕರೆದಂಥ 160 ರೇಷ್ಮೆ ನಿರೀಕ್ಷಕರು ಹಾಗೂ 216 ರೇಷ್ಮೆ ಪ್ರದರ್ಶಕರ

ಹುದ್ದೆಗಳಿಗೆ ಎರಡೂವರೆ ವರ್ಷವಾದರು ಭರ್ತಿಮಾಡಿಲ್ಲ, ಅದಕ್ಕೆ 3 ಕಾರಣಗಳನ್ನು ಕೊಟ್ಟಿದ್ದಾರೆ, ಒಂದು, ರಾಜ್ಯದ ಮಿಾಸಲಾತಿ ನೀತಿಯಲ್ಲಿ ಬದಲಾವಣೆಯಾದದ್ದು, ಅದರ ಮೇಲೆ ಸುಪ್ರೀಂಕೋರ್ಟ್ ಆಜ್ಞೆ ಹಾಗೂ ಕರ್ನಾಟಕ ಆಡಳಿತ ಮಂಡಳಿ ಅಧ್ಯಕ್ಷರೇ ಈಗಾಗಲೇ ರಾಜ್ಯದಲ್ಲಿ ಮಿಾಸಲಾತಿ ನೀತಿ ನಿಗದಿಯಾಗಿದ್ದು ಅದರ ಬಗ್ಗೆ ಅವರು ಕ್ರಮ ತೆಗೆದುಕೊಳ್ಳಬೇಕಾಗಿತ್ತು ಹಾಗೂ ಕರ್ನಾಟಕ ಆಡಳಿತ ನ್ಯಾಯಮಂಡಲಿ ದಾವೆ ಹೂಡಿದೆಯೆಂದು ತಿಳಿಸಿದ್ದಾರೆ. ನಮ್ಮ ವಕೀಲರು ಸರ್ಕಾರದ ವತಿಯಿಂದ ಕೇಸುಗಳನ್ನು ತ್ವರಿತವಾಗಿ ಮುಗಿಸುವಲ್ಲಿ ವಿಫಲರಾಗಿದ್ದಾರೇನೋ ಎಂಬ ಸಂಶಯ ಬರುತ್ತಿದೆ, ಎರಡೂವರೆ ವರ್ಷವಾದರೂ ಈ ಕೇಸ್ ಮುಗಿಸಲು ಸರ್ಕಾರಿ ವಕೀಲರು ಏಕೆ ಪ್ರಯತ್ನಿಸಿಲ್ಲ? ಕೂಡಲೇ ಈ ಕೇಸುಗಳನ್ನು ಮುಗಿಸಿ ನೇಮಕಾತಿ ಕೆಲಸ ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಎಂ.ವರದೇಗೌಡ:- ಅಧ್ಯಕ್ಷರೇ 9-9-94ರಲ್ಲಿ ಉಚ್ಚ ನ್ಯಾಯಾಲಯ 60 ಪರ್ಸೆಂಟ್ ಮಿಾಸಲಾತಿ ಬಗ್ಗೆ ಇದ್ದುದನ್ನು 50 ಪರ್ಸೆಂಟಿಗೆ ಇಳಿಸಲಾಗಿದೆ. 5-3-96ರಲ್ಲಿ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಿದ್ದೇವೆ. 24-1-94ರ ಪಟ್ಟಿ ಪ್ರಕಾರ ವಯೋಮಿತಿ ಇತ್ತೋ ಅದರನ್ವಯ ಆಗಸ್ಟ್ ಅಂತ್ಯದಲ್ಲಿ ಅವರನ್ನೆಲ್ಲ ಕೆಲಸಕ್ಕೆ ತೆಗೆದುಕೊಳ್ಳುವಂಥ ಪ್ರಾಮಾಣಿಕ ಪ್ರಯತ್ನಪಡುತ್ತೇವೆ.

ಶ್ರೀ ಯು.ಬಿ.ಬಣಕಾರ್:- ಕರ್ನಾಟಕ ನ್ಯಾಯ ಮಂಡಲಿಯಲ್ಲಿ ದಾವೆ ಇರುವುದರಿಂದ ಒಂದು ತಿಂಗಳಲ್ಲಿ ಇವರಿಗೆ ಮಾಡಲು ಸಾಧ್ಯವೋ?

ಅಧ್ಯಕ್ಷರು:- ಒಂದು ಪಟ್ಟಿ ಆಗಲೇ ಪ್ರಕಟಿಸಿದ್ದೇವೆ, ಉಳಿದಿದ್ದನ್ನು ಆಗಸ್ಟ್ ಅಂತ್ಯದಲ್ಲಿ ಮಾಡುತ್ತೇವೆ ಅಂತ ಕ್ಲಿಯರಾಗಿ ಹೇಳಿದರು.

ವಿಷಯ:- ಬೆಂಗಳೂರು ನಗರದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 147 (938)

ಶ್ರೀ ಎನ್.ರಾಜಣ್ಣ (ಭಾರತಿನಗರ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ವಿವರಗಳನ್ನು ನೀಡುವುದು.

ಇ) ಇಲ್ಲದಿದ್ದಲ್ಲಿ, 1996-97ನೇ ಸಾಲಿಗೆ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಇದೆಯೇ?

ಶ್ರೀ ಕೆ.ಎಂ.ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು):-